ಕುಳಿತ. ಅವನ ಎರಡೂ ಕೈಗಳನ್ನೂ ತಲೆಯ ಹಿಂದೆ ಆನಿಸಿ ಆಗಸ ನೋಡುತ್ತಾ ಹೇಳಿದ:

'ಅಲ್ಲಾ... ಇಬ್ಬರೂ ಸಮುದ್ರವನ್ನೇ ಆಪೋಶನ ತೊಗೊಳ್ಳುವವರ ಥರ ದುರುಗುಟ್ಟಿ ಅದನ್ನೇ ನೋಡ್ತಾ ಇದ್ದೀರಲ್ಲ...' ಹ್ಹ ಹ್ಹ... ನಕ್ಕ. 'ನಾಳೆ ದಿನ ನಮ್ಮ ಜನ ಎಲ್ಲರೂ ಸಮುದ್ರ ಎಲ್ಲಿ ಅಂತ ಹುಡುಕಾಡಬೇಕಾಗುತ್ತೆ ಕಣೋ... ಪಾಪ ಮೀನುಗಳ ಗತಿ ಏನು. ನಿಮ್ಮ ಹೊಟ್ಟೇನೇ ಸೇರುತ್ತವೋ ಅಥವಾ ನೀರಿಲ್ಲದ ಭೂಮಿ ಮೇಲೆ ಸಾಯುತ್ತವೋ... ಇರಲಿ ಅದಕ್ಕೇನೂ ಬೇಜಾರು ಮಾಡಿಕೊಳ್ಳೋ ಅಗತ್ಯ ಇಲ್ಲ. ಯಾಕೆಂದ್ರೆ, ಬೆಸ್ತರು ದೋಣೀಲಿ ಕೂತು ಹೋಗಿ ಮೀನು ಹಿಡಿಯೋದಕ್ಕಿಂತ ಓಡಾಡಿಕೊಂಡೇ ಮೀನು ಆರಿಸಿಕೊಂಡು ಬಿಡುತ್ತಾರೆ. ...ಹ್ಹ... ಹ್ಹ... ಒಂದು ವೇಳೆ ಮುತ್ತು ರತ್ನ ಸಿಕ್ರೆ ಜನರೆಲ್ಲ ಮೀನು ಬಿಟ್ಟು ಅದರ ಕಡೆಗೆ ಓಡುತ್ತಾರೆ... ಬೆಸ್ತರ ಜೊತೆಗೆ ನಮ್ಮ ಜನ ಕೂಡ ಮುತ್ತು ಆರಿಸಲು ಓಡ್ತಾರೆ... ಕಚೇರಿಗಳೆಲ್ಲ ಬಂದ್... ಹ್ಹ... ಹ್ಹ...ಅಯ್ಯಪ್ಪಾ... ಸಾಕಾಯ್ತು...' ನಗು ನಗುತ್ತಾ ಹರಟುತ್ತಿದ್ದವನನ್ನು ಕಂಡು ರೇಗಿತು.

'ಸಾಕು ನಿಲ್ಸೋ...' ಅಂದೆ.

'ಅಲ್ರಯ್ಯ... ನೀವಂತೂ ಮಾತಾಡಲ್ಲ. ಮಾತಾಡಿದ್ದನ್ನ ಕೇಳಿಸಿಕೊಳ್ಳೋಕೂ ಆಗಲ್ವೇ... ಸರಿ... ಸ್ವಲ್ಪ ಚಳಿ ಜಾಸ್ತಿ ಆಗ್ತಿದೆ. ಮಸಾಲೆಪೂರಿ ತರ್ತೀನಿ ತಾಳು' ಅಂದು ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟೇಹೋದ.

'ಒಳ್ಳೆ ಮನುಷ್ಯ ಕಣೆ ಅವನು. ಬರೀ ತಲೆ ತಿಂತಾನೆ... ಮತ್ತೊಬ್ಬರಿಗೆ ಮಾತಾಡೋಕೂ ಪುರಸೊತ್ತು ಕೊಡಲ್ಲ... ಕೇಳ್ತೀವ ಇಲ್ಲವಾ ಅಂತ ಕೂಡ ಗಮನಿಸಲ್ಲ' ಅಂದೆ. ಮತ್ತೂ ಅವಳದು ಮೌನ, ನಗು ಅಷ್ಟೆ. ನಾನು ಅಸಹನೀಯನಾಗಿದ್ದರೆ ಅವಳು ಶಾಂತವಾಗಿದ್ದಳು. ಅದೆಷ್ಟು ಶಾಂತ, ಮೌನ... ಆ ಚಂದ್ರನಂತೆ, ಸಮುದ್ರದ ದಂಡೆಯ ಮರಳುರಾಶಿಯಂತೆ... ಅವಳನ್ನು ನೋಡಿದರೆ ಕಾವ್ಯ ಕನ್ನಿಕೆಯಂತೆ ಕಾಣುತ್ತಿದ್ದಳು. ರವಿವರ್ಮನ ಚಿತ್ರದ ಮೂನ್ ಲೈಟ್ ಲೇಡಿ ತರಹ. ಯಾಕೋ ಪ್ರಶ್ನಾಳನ್ನು ಕಳೆದುಕೊಂಡು ಬಿಡುತ್ತೇನೆ ಅನ್ನಿಸಿ ಭಯ ಆಯಿತು. ಆ ಹೆದರಿಕೆಯಲ್ಲಿ ಜೋರಾಗಿ ಕೇಳಿದೆ, 'ಏನೇ ಆಗಿದೆ ನಿನಗೆ... ಯಾಕೆ ಹೀಗೆ ಕೊಲ್ತೀಯ?'

ಅವಳು ಆಶ್ಚರ್ಯವೆಂಬಂತೆ ನನ್ನ ಕಡೆ ತಿರುಗಿದಳು 'ನಾನಾ... ನಿನ್ನನ್ನ ಕೊಲ್ಲೋದಾ... ನಿಶಾಂತ್ ಆರ್ ಯು ಆಲ್‌ರೈಟ್?' ಕೇಳಿದಳು. ಅಷ್ಟರಲ್ಲೇ ಡುಗು ಡುಗು ಬೈಕ್ ಸದ್ದು. ಪ್ರಶಾಂತ ಬಂದಿದ್ದ. ಬೈಕ್ ನಿಲ್ಲಿಸುತ್ತಾ ಜೋರಾಗಿ ಹೇಳ್ದ 'ಇನ್ನೇನು ಆ ಹುಡುಗ ತರ್ತಾನೆ. ಆಗಲಾದರೂ ನಿಮ್ಮ ತುಟಿಗಳು ಚಲಿಸುತ್ತವೆ ಅಲ್ವೇ...' ನಕ್ಕ. 'ಹಾಗೆ ತುಟಿಗಳು ಚಲಿಸುವಾಗ ಬಾಯಿಂದ ಸಣ್ಣಸದ್ದು, ನಾಲಿಗೆಯಲ್ಲಿ ರಸ ಚಿಮ್ಮುತ್ತೆ. ಹಾಗೆ ಚಿಮ್ಮಿದ ರಸ ಖಾರ, ಉಪ್ಪಿನ ಸ್ವಾದಕ್ಕೆ ಸ್ಪಂದಿಸುತ್ತ ನಿಮ್ಮ ಗಂಟಲೊಳಗೆ ಇಳಿಯುತ್ತೆ. ಹಾಗೆ ಇಳಿದಾಗ ನಿಮ್ಮ ಧ್ವನಿ ಪೆಟ್ಟಿಗೆಗಳು ಪ್ರಚೋದನೆಗೆ ಒಳಗಾಗುತ್ತವೆ... ಮತ್ತು ಆಗ ಏನಾದರೂ ಮಾತಾಡಲೇ ಬೇಕು ಅಂತ ಅನ್ನಿಸುವಂತೆ ಮಾಡುತ್ತವೆ... ಆಗ...'

'ಏಯ್ ಸಾಕೋ... ಯಾಕೋ ಹೀಗೆಲ್ಲಾ ಮಾತಾಡಿ ಬೋರ್ ಮಾಡ್ತೀಯ! ಇಷ್ಟು ವರ್ಷ ಆದ್ರೂ ಸ್ವಲ್ಪನಾದ್ರೂ ಡಿಸಿಪ್ಲಿನ್ ಕಲೀಲೇ ಇಲ್ಲ ನೀನು. ...ನಿನ್ನ ಜೊತೇಲಿ ಪ್ರಶ್ನಾ ಹೇಗಿದ್ದಾಳೋ... ಆ ಭಗವಂತನಿಗೇ ಗೊತ್ತು' ಅಂದೆ.

ನನ್ನ ಅಸಹನೆಯನ್ನು ಗಮನಿಸದೆಯೇ ಹೇಳಿದ: 'ನೋಡಿದ್ಯಾ... ನಾನು ಬರೀ ಮಸಾಲೆ ಪೂರಿ ಹೆಸರು ಹೇಳಿದ್ದಕ್ಕೇ ಇಷ್ಟು ಚುರುಕಾಗಿ ಮಾತಾಡ್ತಿದ್ದೀಯ. ಇನ್ನು ತಿಂದ ಮೇಲೆ?...'